ಪ್ರೀತಿಯಿಂದ ಓದುತ್ತಾರೆ; ಇತರರಿಗೆ ಓದಿಸುತ್ತಾರೆ. ಇಂಡಿಯಾದ ಅದೃಷ್ಟ ನೆಟ್ಟಗಿಲ್ಲ – ಯಾಕೆಂದರೆ ಇಂಥ ಜನರ ಪ್ರಭಾವ ಬೆಳೆಯುವುದು ತೀರಾ ನಿಧಾನವಾಗತೊಡಗಿದೆ.

...ಜೀವನ ನಿಜಕ್ಕೂ ವಿಚಿತ್ರ. ಐವತ್ತೆರಡು ವರ್ಷವೋ, ಐವತ್ತೆರಡು ಗಂಟೆಯೋ... ಎಲ್ಲಾ ಒಂದೇ.

ನಿನ್ನ
ರಾಮ್ ಮನೋಹರ್

ಕೊನೆಗೂ ಮಾರ್ಚ್ ತಿಂಗಳ ಮತ್ತೊಂದು ಲೋಹಿಯಾ ಪತ್ರದಲ್ಲಿ ಫರೂಖಾಬಾದ್ ಉಪಚುನಾವಣೆಯ ವಿಚಾರ ಬರುತ್ತದೆ! ಅಷ್ಟೊತ್ತಿಗಾಗಲೇ ಲೋಹಿಯಾ ಹಿಮಾಲಯದ ತಪ್ಪಲಿನ ಊರ್ವಶೀಯಂನಲ್ಲಿದ್ದರು. ಚೀನಾ ಆಕ್ರಮಣದ ನಂತರ ಅಲ್ಲಿಗೆ ಮೊದಲ ಸಲ ಭೇಟಿ ಕೊಟ್ಟಿದ್ದರು.

ಪ್ರಿಯ ರಮಲಿ,

ಎಂಟೂವರೆ ಸಾವಿರ ಅಡಿ ಎತ್ತರದಲ್ಲಿ ಕೂತು ನಿನಗೆ ಬರೆಯುತ್ತಿದ್ದೇನೆ. ಕೆಲವು ದಿನಗಳಿಂದ ಬಹಳ ಶ್ರಮ ಹಾಕಬೇಕಾಗಿದೆ. ತಲೆಯಲ್ಲಿ ಎಷ್ಟೊಂದು ವಿಚಾರಗಳು ಸುತ್ತುತ್ತಿವೆಯೆಂದರೆ, ನೀನು ಇಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು.

ಈ ನಡುವೆ ಒಂದು ಬಂಧನವೂ ಆಯಿತು. ಟ್ರಕ್‌ನಲ್ಲಿ ಶಸ್ತ್ರಸಜ್ಜಿತ ಸಿಪಾಯಿಗಳು ಬಂದಿಳಿದರು. ಪ್ರಭುತ್ವಕ್ಕೆ ಪರದೇಶೀಯರ ಮೇಲೆ ತನ್ನ ತಾಕತ್ತನ್ನು ತೋರಿಸಲು ಆಗದಿದ್ದಾಗ ಅದು ದೇಶೀಯರ ಮೇಲೆ ಎರಗುತ್ತದೆ. ಏಪ್ರಿಲ್ ಹೊತ್ತಿಗೆ ದಿಲ್ಲಿಗೆ ಬರಬಹುದು ಎಂದುಕೊಂಡಿದ್ದೆ. ಈಗ ಇನ್ನೂ ತಡವಾಗಬಹುದು.

ಸಾಧ್ಯವಾದರೆ ಫರೂಖಾಬಾದ್‌ಗೆ ಹೋಗಿ ಬಾ. ಒತ್ತಡ ಹೆಚ್ಚಾಗುತ್ತಿದೆ. ಆದರೂ ಎಲೆಕ್ಷನ್ ಫೈಟ್ ಮಾಡಬಾರದು ಎಂದೇ ಅನ್ನಿಸುತ್ತಿದೆ. ಕಮಿಟಿಗಳ ರಚನೆಯಾದ ನಂತರ, ಉಳಿದೆಲ್ಲ ವಿಚಾರಗಳು ಗೊತ್ತಾದಾಗ ಮಾತ್ರ, ಈ ಬಗ್ಗೆ ವಿಶ್ವಾಸ ಹುಟ್ಟುತ್ತದೆ. ನೀನು ನಗರದಲ್ಲಿ, ನಾಲ್ಕಾರು ಹಳ್ಳಿಗಳಲ್ಲಿ ವಿಚಾರಿಸು: ಜನರಿಗೆ ನನ್ನ ಬಗ್ಗೆ ಏನಾದರೂ ಗೊತ್ತಿದೆಯೆ? ಜನರಿಗೆ ಸೋಷಲಿಸ್ಟ್ ಪಾರ್ಟಿಯ ಕೆಲಸದ ಬಗ್ಗೆ ಅರಿವಿದೆಯೆ? ನಾನು ಚುನಾವಣೆಗೆ ನಿಲ್ಲಬೇಕೆಂದು ಜನ ಬಯಸುತ್ತಾರೆಯೆ, ಇತ್ಯಾದಿ. ಮರಹರಿ ಅಥವಾ ಇನ್ಯಾರ ಜೊತೆಯಾದರೂ ಹೋಗು. ಪೂರಾ ರಿಪೋರ್ಟ್ ಬರೆಯಬೇಕು. ಡೈರಿ ಇಟ್ಟುಕೊಳ್ಳಬೇಕು. ಹೆಸರು, ಉತ್ತರ ಎಲ್ಲ ಬರೆದುಕೊಳ್ಳಬೇಕು.

***

ಕೊನೆಗೂ ಫರೂಖಾಬಾದ್ ಉಪಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಲೋಹಿಯಾ ಗಂಭೀರವಾಗಿ ಯೋಚಿಸಲೇಬೇಕಾಯಿತು. ಉತ್ತರ ಪ್ರದೇಶದ ಸಮಾಜವಾದಿ ಪಕ್ಷದ ಕಾರ್ಯಕರ್ತರು ಹಾಗೂ ಬಿಹಾರ, ಮಧ್ಯಪ್ರದೇಶಗಳ ಕಾರ್ಯಕರ್ತರು ಲೋಹಿಯಾರನ್ನು ಚುನಾವಣೆಗೆ ನಿಲ್ಲಬೇಕೆಂದು ಕೋರಲು ಒಂದು ಸಭೆ ಮಾಡಿದರು.

## ಕಳೆದ ಸಂಚಿಕೆಯಲ್ಲಿ



ಲೋಕಸಭಾ ಚುನಾವಣೆಯಲ್ಲಿ ನೆಹರೂ ವಿರುದ್ಧದ ಸ್ಪರ್ಧೆಯಲ್ಲಿ ಸೋತರೂ ಲೋಹಿಯಾ ಅವರ ಪ್ರತಿರೋಧದ ಹೋರಾಟ ತಣ್ಣಗಾಗಲಿಲ್ಲ. ಪ್ರಧಾನಮಂತ್ರಿಯ ದೈನಂದಿನ ವೆಚ್ಚದ ಕುರಿತು ಲೋಹಿಯಾ ಕೇಳಿದ ಪ್ರಶ್ನೆ ಆಡಳಿತ ವರ್ಗದವರು ಹಾಗೂ ಜನಸಾಮಾನ್ಯರ ದೈನಂದಿನ ವೆಚ್ಚದ ನಡುವಿನ ಅಂತರವನ್ನು ಎತ್ತಿ ತೋರಿಸುವಂತಿತ್ತು. ಭಾರತದ ಮೇಲೆ ಚೀನಾ ನಡೆಸಿದ ಆಕ್ರಮಣದ ಸಂದರ್ಭದಲ್ಲಿ ಡಾಕ್ಟರ್ ಸಾಹೇಬರು ಮಂಡಿಸಿದ ಚಿಂತನೆ ಅವರ ಮುನ್ನೋಟದ ಶಕ್ತಿಯನ್ನು ಸೂಚಿಸುವಂತಿತ್ತು. ಸೌಂದರ್ಯ, ಸಮಾಜ ವಿಜ್ಞಾನ ಹಾಗೂ ರಾಜಕೀಯ ತಂತ್ರಗಾರಿಕೆಯ ನೆಲೆಗಟ್ಟಿನಲ್ಲಿ ಅವರು ಬಹು ಆಯಾಮಗಳಿಂದ ಭಾರತ–ಚೀನಾ ಬಿಕ್ಕಟ್ಟನ್ನು ವಿಶ್ಲೇಷಿಸಿದರು. ಚೀನಾ ಕುರಿತ ಲೋಹಿಯಾ ಚಿಂತನೆಯ ಮಹತ್ವ ಆ ಕಾಲದ ಭಾರತಕ್ಕೆ ಸರಿಯಾಗಿ ಅರ್ಥವಾಗಲಿಲ್ಲ. ದೇಶದ ಜನ ಜಾತಿ, ಮತ, ಧರ್ಮಗಳ ಆಧಾರದ ಮೇಲೆ ಒಡೆದುಹೋದರೆ ದೇಶ ಒಟ್ಟಾಗಿ ಹೋರಾಡಲಾರದು ಎನ್ನುವ ಲೋಹಿಯಾರ ದಾರ್ಶನಿಕ ಸತ್ಯ–ಮುನ್ನೋಟ ಇಂದಿಗೂ ದಾರಿದೀಪದಂತಿದೆ.

ಲೋಹಿಯಾ ಆ ಕಾರ್ಯಕರ್ತರಿಗೆ ಬಗೆಬಗೆಯ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆದುಕೊಂಡರು. ಫರೂಖಾಬಾದ್ ಲೋಕಸಭಾ ಕ್ಷೇತ್ರ ಹಾಗೂ ವಿಧಾನಸಭಾ ಕ್ಷೇತ್ರಗಳನ್ನು ಅಧ್ಯಯನ ಮಾಡಿ ಬದೌರಿಯಾ ಕೊಟ್ಟಿದ್ದ ವಿವರಗಳನ್ನು ಓದಿಕೊಂಡು ಅವುಗಳನ್ನೆಲ್ಲ ಕಾರ್ಯಕರ್ತರ ಜೊತೆ ಚರ್ಚಿಸಿದರು; ಚುನಾವಣೆಗೆ ನಿಲ್ಲಲು ಒಪ್ಪಿದರು.

ಲೋಹಿಯಾ ಫರೂಖಾಬಾದ್ ಅಭ್ಯರ್ಥಿಯಾಗಲು ಒಪ್ಪಿದ ತಕ್ಷಣ ಬದೌರಿಯಾ ಹಾಗೂ ರಾಜ್ ನಾರಾಯಣ್ ಚುನಾವಣಾ ವೆಚ್ಚಕ್ಕೆಂದು ತಲಾ ನೂರು ರೂಪಾಯಿಗಳನ್ನು ಹಾಕಿಕೊಂಡರು. ಮಾರನೆಯ ದಿನವೇ ಫರೂಕಾಬಾದ್‌ಗೆ ಹೋಗಿ ಚುನಾವಣೆಯ ಕೆಲಸ ಶುರು ಮಾಡಲು ನಿರ್ಧರಿಸಿದರು. ಮಧು ಲಿಮಯೆ ಸದ್ಯದಲ್ಲೇ ಇನ್ನೂರು ರೂಪಾಯಿ ಕಳಿಸುವುದಾಗಿ ಪತ್ರ ಬರೆದರು. ಕೈಯಲ್ಲಿದ್ದ ಇನ್ನೂರು ರೂಪಾಯಿಯ ಧೈರ್ಯದ ಮೇಲೆ ಬದೌರಿಯಾ ಫರೂಖಾಬಾದಿನಲ್ಲಿ ನೂರು ರೂಪಾಯಿ ಬಾಡಿಗೆಯ ಚುನಾವಣಾ ಕಚೇರಿ ಶುರು ಮಾಡಿಯೇ ಬಿಟ್ಟರು. ಕೊನೆಗೆ ಮನೆಯ ಮಾಲೀಕರು ಈ ಸಣ್ಣ ಜಾಗಕ್ಕೆ ಬಾಡಿಗೆ ಬೇಡವೆಂದು ಅದನ್ನೂ ಮಾಫಿ ಮಾಡಿದರು.

***

ಫರೂಖಾಬಾದ್ ಕಾಂಗ್ರೆಸ್ಸಿನ ಭದ್ರಕೋಟೆಯಾಗಿತ್ತು. 1952ರ ಪ್ರಥಮ ಸಾರ್ವತ್ರಿಕ ಚುನಾವಣೆಯಿಂದ ಹಿಡಿದು 1962ರವರೆಗೂ ಬ್ರಾಹ್ಮಣ ಸಮುದಾಯದ ಜನಪ್ರಿಯ ಲಾಯರ್ ದುಬೆ ಗೆಲ್ಲುತ್ತಾ ಬಂದಿದ್ದರು. 1962ರ ಚುನಾವಣೆಯಲ್ಲಿ ದುಬೆ ತಮ್ಮ ಸಮೀಪದ ಎದುರಾಳಿ ಪ್ರಜಾ ಸೋಷಲಿಸ್ಟ್ ಪಾರ್ಟಿಯ ಭರತ್ ಸಿಂಗ್ ರಾಥೋರ್ ಅವರನ್ನು ಸುಮಾರು 15000 ಮತಗಳಿಂದ ಸೋಲಿಸಿದ್ದರು. ಸೋಷಲಿಸ್ಟ್ ಪಾರ್ಟಿಯ ಶಿವಶಂಕರ್ ಸಿಂಗ್‌ಗೆ 10900 ಮತಗಳು ಬಿದ್ದಿದ್ದವು.

1963ರ ಉಪಚುನಾವಣೆಯ ಕಾಲ ಭಿನ್ನವಾಗಿತ್ತು. ಚೀನಾ ಮುಖಾಮುಖಿಯ ನಂತರ ನೆಹರು ಸರ್ಕಾರದ ಜನಪ್ರಿಯತೆ ಕುಸಿದಿತ್ತು. ವಿರೋಧ ಪಕ್ಷಗಳ ದನಿ ಗಟ್ಟಿಯಾಗಿತ್ತು. ಲೋಹಿಯಾ ದೇಶದ ಮುಂಚೂಣಿ ವಿರೋಧಿ ದನಿಯಾಗಿ ರೂಪುಗೊಂಡಿದ್ದರು. ಲೋಹಿಯಾ ಚುನಾವಣೆಗೆ ಸ್ಪರ್ಧಿಸುತ್ತಾರೆಂದ ಮೇಲೆ ಕಾಂಗ್ರೆಸ್ ತಲೆ ಕೆಡಿಸಿಕೊಳ್ಳಲೇಬೇಕಾಯಿತು. ಡಾ. ಕೇಸ್ಕರ್ ಅವರನ್ನು ಚುನಾವಣೆಗೆ ನಿಲ್ಲಿಸಿತು. ಹಿಂದಿನ ಸರ್ಕಾರದಲ್ಲಿ ವಾರ್ತಾ ಮತ್ತು ಪ್ರಸಾರ ಮಂತ್ರಿಯಾಗಿದ್ದ ಕೇಸ್ಕರ್ 1962ರ ಚುನಾವಣೆಯಲ್ಲಿ ಬೇರೊಂದು ಕ್ಷೇತ್ರದಲ್ಲಿ ಸೋತಿದ್ದರು.

ಉಪಚುನಾವಣೆಯ ಶುರುವಿನಲ್ಲಿ ಚುನಾವಣೆಗೆ ನಿಲ್ಲುವುದಿಲ್ಲವೆಂದು ಹೇಳಿದ್ದ ಪ್ರಜಾಸಮಾಜವಾದಿ ಪಕ್ಷದ ಸ್ಥಳೀಯ ನಾಯಕ ಭರತ್‌ಸಿಂಗ್ ರಾಥೋರ್ ಕೂಡ ಚುನಾವಣೆಗೆ ನಿಂತರು. 15 ಏಪ್ರಿಲ್ 1963ರಂದು ನಾಮಪತ್ರ ಸಲ್ಲಿಕೆಯಾಯಿತು. 18 ಮೇ 1963ರಂದು ಚುನಾವಣೆ ನಡೆಯಿತು.

ಈ ಉಪಚುನಾವಣೆಯ ಅಧ್ಯಯನ ವರದಿಯೊಂದರಿಂದ ಆಯ್ದ ಭಾಗಗಳು:

ಕಾಂಗ್ರೆಸ್ ನಾಯಕ ಕೇಸ್ಕರ್ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ಆದರೆ ಲೋಹಿಯಾ ಭಾಷಣಗಳ ಜವಾರಿ ಹೊಡೆತಗಳಿಗೆ ಅವರ ಬಳಿ ಜವಾಬ್ ಇರಲಿಲ್ಲ. ಲೋಹಿಯಾ ಥರ ಬಿರುಗಾಳಿಯಂತೆ ಸುತ್ತುವ ತ್ರಾಣವೂ ಕೇಸ್ಕರ್‌ಗಿರಲಿಲ್ಲ. ಲೋಹಿಯಾರ ಕಮಿಟೆಡ್ ಕಾರ್ಯಕರ್ತರು ಊರೂರುಗಳಲ್ಲಿ ಬೀಡು ಬಿಟ್ಟಿದ್ದರು.

ಕಾರ್ಯಕರ್ತರು ಕೆಲಸ ಮಾಡಿದ ರೀತಿ ಕುರಿತು ಬದೌರಿಯಾ ಬರೆಯುತ್ತಾರೆ: 'ಫರೂಖಾಬಾದಿಗೆ ಬೇರೆ ಬೇರೆ ಕಡೆಯಿಂದ ಬಂದ ಕಾರ್ಯಕರ್ತರು ತೀರ್ಥಯಾತ್ರೆಗೆ ಬಂದವರಂತೆ ಬಂದಿದ್ದರು.